ಸಾಕ್ಷಿಯನ್ನು ದಿಃ 04-06-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ ಹೆಚ್ ಎಮ್ ಎನ್ ವಕೀಲರಿಂದ (ವಾದಿ ಪರವಾಗಿ)**

ಈ ದಾವೆ ಹೂಡುವ ಮೊದಲು ನನಗೆ ವಾದಿ ಪರಿಚಯ ಇರಲಿಲ್ಲ. ವಾದಿಯೊಂದಿಗೆ ನಾನು ಯಾವುದೇ ವ್ಯವಹಾರ ಮಾಡಿಲ್ಲ. ನನಗೆ ತೊಂದರೆ ಮಾಡಲು ವಾದಿಗೆ ಯಾವುದೇ ಕಾರಣ ಇಲ್ಲ ಎಂದರೆ ಸರಿ. ನನಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿ ಸುಳ್ಳು ದಾವೆ ಸಲ್ಲಿಸಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಜಮೀನು ಖರೀದಿಸುವ ಮೊದಲು ಸರ್ವೇ ನಂ.507/1 ಆಗಿತ್ತು ಎಂದರೆ ಸರಿ. ಅದು 9 ಎಕರೆ 5 ಗುಂಟೆ ಇದ್ದು ಅದರಲ್ಲಿ ನಾನು ಪಶ್ಚಿಮ ಭಾಗದ 4 ಎಕರೆ 23 ಗುಂಟೆ ಖರೀದಿಸಿದ್ದೇನೆ. ನಾನು ಜಮೀನು ಖರೀದಿಸಿದ ನಂತರ ಉಳಿದ ಜಮೀನು ಯಾರ ಹೆಸರಿನಲ್ಲಿ ಉಳಿಯಿತು ಎಂದರೆ ಪ್ರತಿವಾದಿ ನಂ.2 ರ ತಮ್ಮ ಅಂದರೆ ವಾದಿ ಹೆಸರಿಗೆ ಉಳಿಯಿತು. ಆ ಬಗ್ಗೆ ನಾನು ದಾಖಲೆ ನೋಡಿಲ್ಲ ಎಂದರೆ ಸರಿ. ನಾನು ಜಮೀನು ಖರೀದಿಸುವ ಮೊದಲು ಆ ಜಮೀನು ಪ್ರತಿವಾದಿ ನಂ.2 ರಿಗೆ ಹೇಗೆ ಬಂತು ಎಂದು ಪರೀಶೀಲಿಸಿದ್ದು, ಸದರಿ ಜಮೀನು ಅವರ ತಂದೆಯಿಂದ ಬಂದಿತ್ತು. ಆ ಬಗ್ಗೆ ದಾಖಲೆ ನೋಡಿಲ್ಲ. ಸದರಿ ಜಮೀನು ಪ್ರತಿವಾದಿ ನಂ.2 ರಿಗೆ ಅವರ ತಂದೆಯಿಂದ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಜಮೀನು ಖರೀದಿಸುವ ಮೊದಲು ದಾಖಲೆಗಳ ಬಗ್ಗೆ ಕಾನೂನು ಅಭಿಪ್ರಾಯ ಪಡೆದಿಲ್ಲ ಎಂದರೆ ಸರಿಯಲ್ಲ. ಜಮೀನು ಖರೀದಿಸುವ ಮೊದಲು ಆ ಬಗ್ಗೆ ನಾನು ಪತ್ರಿಕಾ ಪ್ರಕಟಣೆ ಹೊರಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಜಮೀನು ಖರೀದಿಸುವಾಗ ಆ ಬಗ್ಗೆ ಯಾರದು ತಕರಾರು ಇರಲಿಲ್ಲ ಎಂದು ಹೇಳುತ್ತಾರೆ. ವಾದಿ ಮತ್ತು ಪ್ರತಿವಾದಿ ನಂ.2 ರ ನಡುವೆ ಪಾಲು ಆಗಿತ್ತು, ನಾನು ಖರೀದಿಸಿದ ಆಸ್ತಿ 2 ನೇ ಪ್ರತಿವಾದಿ ಪಾಲಿಗೆ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಜಮೀನು ಖರೀದಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಜಮೀನು ಖರೀದಿಸುವಾಗ ವಾದಿ ಹಾಜರಿರಲಿಲ್ಲ ಮತ್ತು ಖರೀದಿ ಪತ್ರಕ್ಕೆ ಸಹಿ

ಮಾಡಿಲ್ಲ ಎಂದರೆ ಸರಿ. ನಾನು ಜಮೀನು ಖರೀದಿಸಿದ ವಿಚಾರವಾಗಿ ವಾದಿಯಿಂದ ಯಾವುದೇ ಒಪ್ಪಿಗೆ ಪತ್ರ ಪಡೆದಿಲ್ಲ ಎಂದರೆ ಸರಿ.

ಖರೀದಿಪತ್ರದ ಸಾಕ್ಷಿದಾರರಾದ ಫಕ್ಕೀರೇಶ ಯಲ್ಲಪ್ಪ ಹಿರೇಮಣಿ ಆನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಕ್ಕೀರೇಶನ ಆರೋಗ್ಯದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ನಾನು ಖರೀದಿಸಿದ ಜಮೀನಿನ ಚಕಬಂದಿ ಕೇಳಿದರೆ, ಪೂರ್ವಕ್ಕೆಃ ವಾದಿಯ ಪಾಲಿನ ಜಮೀನು, ಪಶ್ಚಿಮಕ್ಕೆಃ ಶಾಂತಕುಮಾರ ಕೋಳಿವಾಡ ಇವರ ಇಮೀನು, ದಕ್ಷಿಣಕ್ಕೆಃ ಬಸವಂತಪ್ಪ ನಾಗರಡ್ಡಿ ಇವರ ಜಮೀನು ಹಾಗೂ ಉತ್ತರಕ್ಕೆಃ ಶಶಿಕಾಂತ ಹಿರೇಮಣಿ ಇವರ ಜಮೀನು ಇರುತ್ತದೆ. ನನ್ನ ಖರೀದಿ ಪತ್ರ ವಾದಿಗೆ ಬಂಧನಕಾರಕ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರಾಮಾಣಿಕ ಖರೀದಿದಾರನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಪ್ರತಿವಾದಿ ನಂ.1 ಮತ್ತು 2 ಏಕತರ್ಫಿ ಇದ್ದು, ಪ್ರತಿವಾದಿ ನಂ.3, 5 ಮತ್ತು 6 ಗೈರು ಹಾಜರಿದ್ದು, ಯಾರೂ ಪ್ರತಿನಿಧಿಸದ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿದೆ)**

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.